**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಕ್ಕನಾಯಕನಹಳ್ಳಿ**

**ಸಿ.ಸಿ. ನಂ.497/2020**

**ಸಿ ಡಬ್ಲ್ಯೂಃ 16**
**ಪಿ ಡಬ್ಲ್ಯೂಃ 09**

| | | |
|---|---|---|
| ಹೆಸರು | : | ಯೋಗಿಶ್ |
| ತಂದೆಯ ಹೆಸರು | : | ಎನ್ ವೆಂಕಟಚಲಯ್ಯ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತ ಪಿ ಎಸ್ ಐ |
| ವಾಸಸ್ಥಳ | : | ತುಮಕೂರು |

**ದಿನಾಂಕಃ 12.05.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ನಾನು ಹಂದನಕೆರೆ ಪೊಲೀಸ್ ಠಾಣೆಯಲ್ಲಿ 30.04.2020 ರಿಂದ 30.06.2022 ರವರೆಗೆ ಆರಕ್ಷಕ ಉಪನಿರೀಕ್ಷಕರಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದಲ್ಲಿ ದಿಃ 09.06.2020 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-15 ರವರಿಂದ ಪಡೆದು ಪರಿಶೀಲಿಸಿ ಅದೇ ದಿವಸ ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ತಹಸೀಲ್ದಾರ್ ಚಿ.ನಾ ಹಳ್ಳಿಯವರಿಗೆ ಮನವಿ ಸಲ್ಲಿಸಿರುತ್ತೇನೆ. ದಿಃ 22.06.2020 ರಂದು ಈ ಪ್ರಕರಣದಲ್ಲಿ ಜಪ್ತಿ ಮಾಡಿದ ಮದ್ಯದ ಪ್ಯಾಕೆಟ್ ಗಳಲ್ಲಿ ರಾಸಾಯನಿಕ ಪರೀಕ್ಷೆಗೆ ಸ್ಯಾಂಪಲ್ ಗಾಗಿ 4 ಪ್ಯಾಕೆಟ್ ಅನ್ನು ತೆಗೆದು ಉಳಿದ ಮದ್ಯವನ್ನು ಅಬಕಾರಿ ಇಲಾಖೆ ಚಿ.ನಾ ಹಳ್ಳಿಯವರಿಗೆ ಸಲ್ಲಿಸಿರುತ್ತೇನೆ. ದಿಃ 24.06.2020 ರಂದು ಈ ಪ್ರಕರಣದ ಸಾಕ್ಷಿ ನಾಗರಾಜುರವರ ಹೇಳಿಕೆ ಪಡೆದಿರುತ್ತೇನೆ. ತಹಸೀಲ್ದಾರ್ ಚಿ.ನಾ ಹಳ್ಳಿಯವರು ಘಟನ ಸ್ಥಳದ ದಾಖಲಾತಿಯನ್ನು ಸಲ್ಲಿಸಿರುತ್ತಾರೆ ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 14.07.2020 ರಂದು ಈ ಪ್ರಕರಣದ FSL ವರಿದಿಯನ್ನು ಸಂಬಂಧಪಟ್ಟ ಅಧಿಕಾರಿಯಿಂದ ಪಡೆದಿರುತ್ತೇನೆ. ನನಗೆ ಆರೋಗ್ಯ ಸರಿಯಿಲ್ಲದ ಕಾರಣ ಮುಂದಿನ ತನಿಖೆಯನ್ನು ಚಾಸ-17 ರವರಿಗೆ ವಹಿಸಿರುತ್ತೇನೆ. FSL ವರದಿಯನ್ನು

ನೋಡುತ್ತಿದ್ದು ಅದನ್ನು ನಿಪಿ.10 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು 10(ಎ) ಎಂದು ಗುರುತಿಸಲಾಯಿತು. ತಹಸೀಲ್ದಾರ್ ರವರು ಕೊಟ್ಟ ವರದಿಯನ್ನು ನಿಪಿ.11 ಎಂದು, ಸಾಕ್ಷಿಯ 11(ಎ) ಎಂದು ಗುರುತಿಸಲಾಯಿತು. ಅಬಕಾರಿ ನಿರೀಕ್ಷಕರಿಗೆ ಕೊಟ್ಟ ನಿವೇದನೆಯನ್ನು ನಿಪಿ.12 ಎಂದು ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಲಾಯಿತು. FSL ವರದಿಗೆ ತೆಗೆದ ಸ್ಯಾಂಪಲ್ ಮದ್ಯದ ಪ್ಯಾಕೆಟ್ ಅನ್ನು ಎಂ.ಓ.1 ರಿಂದ 4 ಎಂದು ಗುರುತಿಸಲಾಯಿತು. ನಾಗರಾಜುರವರು ನನ್ನ ಮುಂದೆ ನಿಪಿ.13 ರಂತೆ ಹೇಳಿಕೆ ಕೊಟ್ಟಿರುತ್ತಾರೆ.

**ಪಾಟೀ ಸವಾಲುಃ ಶ್ರೀಮತಿ GCA ವಕೀಲರಿಂದ** ಆರೋಪಿ ಪರವಾಗಿಃ

ತಹಸೀಲ್ದಾರ್ ರವರಿಗೆ ದಾಖಲೆ ಸಲ್ಲಿಸಲು ಪತ್ರ ವ್ಯವಹಾರವನ್ನು ಮಾಡಿರುತ್ತೇನೆ. ಅದನ್ನು ಚಾರ್ಜ್ ಶೀಟ್ ನಲ್ಲಿ ಹಾಜರುಪಡಿಸಿರುವುದಿಲ್ಲ. ನಿಪಿ.6 ಪಹಣಿ ಪತ್ರಿಕೆಯನ್ನು ಹಣ ಪಡೆದು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ನಿಪಿ.6 ರಲ್ಲಿ ನಮೂದಾಗಿದೆ ಆಗಿದೆ ಎಂದರೆ ನಿಜ. ಆದರೆ ಅದು ಯಾವಾಗಲೂ ಅದೇ ರೀತಿ ಬರುತ್ತದೆ. FSL ವರದಿಗೆ ನಮ್ಮ ಸಿಬ್ಬಂದಿಯನ್ನು ನೇಮಿಸಿರುತ್ತೇನೆ. ಈ ಬಗ್ಗೆ ದಾಖಲೆ ಇರುವುದಿಲ್ಲ. ಚಾಸಾ-11 ನನ್ನ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ನೋಂದಾಯಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.**)

ಓ.ಹೇ.ಕೆ.ಸರಿ ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.